(ಸಾಕ್ಷಿಯನ್ನು ಇಂದು ದಿಃ25.03.2019 ರಂದು ಕರೆಸಿ ಪ್ರಮಾಣ ವಚನವನ್ನು ಭೋದಿಸಲಾಯಿತು)

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎಸ್.ಸಿ.ಎಚ್. ವಕೀಲರಿಂದ

ನಾನು ಈ ಕೇಸಿನಲ್ಲಿ ಅರ್ಜಿದಾರನಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಭಾಗಾಂಶವಾಗಿ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿದ್ದು ಇರುತ್ತದೆ. ಅದರಲ್ಲಿ ಬರೆದಿರುವ ಅಂಶಗಳು ಸರಿ ಮತ್ತು ಸತ್ಯ ಇರುತ್ತವೆ. ಮತ್ತು ಸದರಿ ಪ್ರಮಾಣ ಪತ್ರಿಕೆಗೆ ನಾನು ನನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ.

ಪ್ರಥಮ ವರ್ತಮಾನ ವರದಿ, ಪಿರ್ಯಾದಿ, ಗುನ್ನೆ ಜಾಗೆಯ ಪಂಚನಾಮೆ, ಅಪಘಾತಪಡಿಸಿದ ವಾಹನ ಪಂಚನಾಮೆ, ಶವ ಪಂಚನಾಮೆ, ಪಿ.ಎಂ. ವರದಿ, ಎಂ.ವಿ. ವರದಿ ಇವುಗಳ ಟ್ರೂ ಕಾಪಿಗಳನ್ನು ನಿ.ಪಿ.1 ರಿಂದ 7 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಶ್ರೀ ಎಸ್.ಸಿ.ಎಚ್. ವಕೀಲರು ಸಮಯ ಕೋರಿದ್ದಾರೆ. ನೀಡಲಾಯಿತು.

ಓ ಹೇ ಕೇ ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು, ಮುದ್ದೇಬಿಹಾಳ.

(ಸಾಕ್ಷಿಯನ್ನು ಇಂದು ದಿಃ21.10.2019 ರಂದು ಕರೆಸಿ ಪ್ರಮಾಣ ವಚನವನ್ನು ಭೋದಿಸಲಾಯಿತು)

ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಐ.ಎಸ್.ಎಚ್ ವಕೀಲರಿಂದ

ಈ ದಿನ ದಾಖಲೆಗಳನ್ನು ಹಾಜರುಪಡಿಸಿದ್ದು, ಚಾರ್ಜಶೀಟನ್ ದೃಡಿಕೃತ ನಕಲನ್ನು **ನಿಪಿ-8** ಎಂದು, ಆನಂದ ಕುಲಕರ್ಣಿಯವರ 2 ಹೇಳಿಕೆಗಳ ದೃಡಿಕೃತ ನಕಲುಗಳನ್ನು **ನಿಪಿ-9 ಮತ್ತು 10** ಎಂದು ಗುರುತಿಸಲಾಯಿತು. ಅರ್ಜಿಯಲ್ಲಿ ಕೇಳಿದಂತೆ ಆದೇಶ ಮಾಡಬೇಕೆಂದು ವಿನಂತಿ.

ಪಾಟಿ ಸವಾಲು**:** ಎದುರುದಾರರ ಪರ ಶ್ರೀ. ಜೆ.ಎ.ಸಿ ವಕೀಲರು ಪಾಟಿ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

ಓ ಹೇ ಕೇ ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು, ಮುದ್ದೇಬಿಹಾಳ.